# ಜಿ.ಎಸ್. ಶಿವರುದ್ರಪ್ಪನವರ ಕಾವ್ಯಮೀಮಾಂಸೆಯ ತಾತ್ವಿಕ ಚಿಂತನೆಗಳು

**ಪರಸಪ್ಪ ಹೆಚ್.[1] & ಸೋಮಶೇಖರ ಎಂ.[2]**

[1]ಸಂಶೋಧನಾರ್ಥಿ, ಮಾನ್ಯತಾ ಕೇಂದ್ರ, ವೀರಶೈವ ಮಹಾವಿದ್ಯಾಲಯ, ಕನ್ನಡ ವಿಶ್ವವಿದ್ಯಾಲಯ ಹಂಪಿ.

[2]ಸಹ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು, ಕನ್ನಡ ವಿಭಾಗ, ಎಸ್.ಜಿ.ಆರ್.ಸಿ.ಎಂ. ಸರ್ಕಾರಿ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು, ಬಳ್ಳಾರಿ.

**Received: 19/01/2025 ; Accepted: 15/02/2025 ; Published: 03/03/2025**

**DOI: https://doi.org/10.5281/zenodo.14961396**

## ABSTRACT:

ಮೀಮಾಂಸೆ ಎಂದರೆ ಚಿಂತನೆ, ಚರ್ಚೆ ಎಂದರ್ಥ. ಕಾವ್ಯವನ್ನು ಕುರಿತ ಚರ್ಚೆಯನ್ನು ಕಾವ್ಯಮೀಮಾಂಸೆ ಎಂದು ಕರೆಯಲಾಗಿದೆ. ಅಂದರೆ ಕವಿ-ಕಾವ್ಯ-ಸಹೃದಯ ವಿಚಾರಗಳನ್ನು ಕುರಿತ ಚರ್ಚೆ ಕಾವ್ಯದ ಆಸ್ವಾದನೆಯಿಂದ ಉಂಟಾಗುವ ಅನುಭವ ಅದಕ್ಕೆ ಕಾರಣವಾದ ತೃತೀಯ ರೂಪ ಮತ್ತು ಸ್ವರೂಪ ಇವುಗಳನ್ನು ವಿವರಿಸುವ ಶಾಸ್ತ್ರವೇ ಕಾವ್ಯಮೀಮಾಂಸೆ. ಪಾಶ್ಚತ್ಯರಲ್ಲಿ ಮಾತಿನ ವಿವಿಧ ರೀತಿಗಳನ್ನು ಹೇಳುವ ಭಾಷಣ ಮತ್ತು ಲೇಖನಶಾಸ್ತ್ರ ಎಂಬ ಒಂದು ಶಾಸ್ತ್ರವಿದೆ. ಹೀಗೆ ಉಕ್ತಿ ಚಮತ್ಕಾರವನ್ನು ತಿಳಿಸುವ ಶಾಸ್ತ್ರವೇ 'ಅಲಂಕಾರಶಾಸ್ತ್ರ' ಕಾವ್ಯದ ತಿರುಳನ್ನು ಅದರ ನಿರ್ಮಾಣ ಕ್ರಮವನ್ನು ನಿರೂಪಿಸುವದಕ್ಕೆ ಕಾವ್ಯಮೀಮಾಂಸೆ ಮತ್ತೊಂದು ಶಾಸ್ತ್ರ. ಸೌಂದರ್ಯ ಸ್ವರೂಪವನ್ನು ವಿಚಾರಮಾಡುವ ಸೌಂದರ್ಯಮೀಮಾಂಸೆ ಇದು ಮತ್ತೊಂದು ಶಾಸ್ತ್ರ. ಈ ಮೂರು ಶಾಸ್ತ್ರಗಳು ಪಾಶ್ಚಾತ್ಯರಲ್ಲಿ ಪ್ರತ್ಯೇಕವಾಗಿ ಬೆಳೆದಿವೆ ಆದರೆ ಭಾರತೀಯ ಕಾವ್ಯಮೀಮಾಂಸೆಯು ಈ ಮೂರನ್ನು ಒಳಗೊಂಡಿದೆ.

ಈ ಚರ್ಚೆಯು ಚರಿತ್ರೆಯಲ್ಲಿ ಬಳಕೆಗೆ ಬಂದದ್ದು ಒಂಬತ್ತನೆಯ ಶತಮಾನದ ವೇಳೆಗೆ. ಕಾವ್ಯ ವಿಚಾರವನ್ನು ಕುರಿತ ಚರ್ಚೆಗೆ 'ಕಾವ್ಯ ಮೀಮಾಂಸೆ' ಎಂಬ ಹೆಸರು ಮೊಟ್ಟಮೊದಲಿಗೆ ಕಾಣಿಸಿಕೊಳ್ಳುವುದು ರಾಜಶೇಖರನಲ್ಲಿಯೆ. ಅವನ ಕೃತಿಯ ಹೆಸರು 'ಕಾವ್ಯ ಮೀಮಾಂಸಾ'. ಆದರೆ ಇದಕ್ಕೆ ಮೊದಲು ಕಾವ್ಯ ಶಾಸ್ತ್ರವನ್ನು ಕುರಿತ ಗ್ರಂಥಗಳಿಗೆ 'ಅಲಂಕಾರಶಾಸ್ತ್ರ' ಎಂದೇ ಹೆಸರು. ಅತ್ಯಂತ ಪ್ರಾಚೀನ ಆಲಂಕಾರಿಕನಾದ ಭಾಮಹನ ಕೃತಿಯ ಹೆಸರು 'ಕಾವ್ಯಾಲಂಕಾರ' ವಾಮನನದು 'ಕಾವ್ಯಲಂಕಾರಸೂತ್ರ'. ರುದ್ರಟನದು ಕಾವ್ಯಾಲಂಕಾರ'. ಎಂದರೆ 'ಅಲಂಕಾರ ಶಾಸ್ತ್ರ' ಎನ್ನುವುದು ಕಾವ್ಯ ಮೀಮಾಂಸೆಗೆ ಇದ್ದ ಹಳೆಯ ಹೆಸರು ಇದಕ್ಕೆ ಹಿಂದಿನ ಶಾಸ್ತ್ರಕಾರರಿಗೆ ಕಾವ್ಯದ ಬಗ್ಗೆ ಇದ್ದ ಕಲ್ಪನೆಯೇ ಕಾರಣ ಎನ್ನಬಹುದು. ಕಾವ್ಯವೆಂದರೆ ಒಂದು ಬಗೆಯ ಅಲಂಕಾರ ಅಥವಾ ಉಕ್ತಿ ವೈಚಿತ್ರ್ಯಗಳಿಂದ ಕೂಡಿರುವಂಥದ್ದು ಎಂದು ಭಾವಿಸಿದ್ದರಿಂದ, ಮತ್ತು ಕಾವ್ಯವು ಅಲಂಕಾರಗಳಿಂದಲೇ ಗ್ರಾಹ್ಯವಾಗುತ್ತದೆ ಎಂದು ತಿಳಿದಿದ್ದರಿಂದ ಕಾವ್ಯವನ್ನು ಕುರಿತ ಚರ್ಚೆಯನ್ನು ಒಳಗೊಳ್ಳುವ ಗ್ರಂಥಕ್ಕೆ 'ಅಲಂಕಾರಶಾಸ್ತ್ರ' ಎಂದು ಕರೆದಂತೆ

ತೋರುತ್ತದೆ. ಆದರೆ ಈ ಚರ್ಚೆಯ ಚರಿತ್ರೆಯಲ್ಲಿ ಕ್ರಮೇಣ ಕಾವ್ಯದ ಸ್ವಾರಸ್ಯವನ್ನು, ಕಾವ್ಯದ ಇತರ ಅಂಗಗಳಲ್ಲಿ ಅನ್ವೇಷಿಸುತ್ತ ಮುಂದುವರಿದ ಹಾಗೆ, ಕಾವ್ಯವನ್ನು ಕುರಿತ ಚರ್ಚೆಗೆ ಅಲಂಕಾರಶಾಸ್ತ್ರ ಎಂದು ಕರೆಯುವುದು ಪರಿಮಿತವೆಂದು ಕಂಡದ್ದರಿಂದ, ಈ ಶಾಸ್ತ್ರಕ್ಕೆ ಕಾವ್ಯ ಮೀಮಾಂಸೆ ಎಂದು ಕರೆಯಲು ಮೊದಲು ಮಾಡಿದರೆಂದು ತೋರುತ್ತದೆ. ವಾಸ್ತವವಾಗಿ ಕಾವ್ಯಮೀಮಾಂಸೆ' ಎನ್ನುವುದೇ 'ಅಲಂಕಾರಶಾಸ್ತ್ರ' ಎನ್ನುವದಕ್ಕಿಂತ ಹೆಚ್ಚು ಉಚಿತವೂ ಹಾಗೂ ವ್ಯಾಪಕಾರ್ಥವನ್ನುಳ್ಳದ್ದೂ ಆಗಿದೆ.

ವಿಮರ್ಶೆ ಎಂಬುದು ಪಾಶ್ಚಾತ್ಯರಲ್ಲಿ 17ನೇ ಮತ್ತು 18ನೇ ಶತಮಾನದಲ್ಲಿ ಕಂಡು ಬಂದಂತಹ ಒಂದು ಸಾಹಿತ್ಯಕ ಶಿಸ್ತು. ಈ ವಿಮರ್ಶೆ ಎಂಬ ಪರಿಕಲ್ಪನೆಯು ಭಾರತೀಯರಿಗೆ ತೀರ ಹೊಸದೆಂಬಂತೆ ಕಾಣಿಸುತ್ತದೆ. ಇದು ಭಾರತಕ್ಕೆ ಬ್ರಿಟೀಷರ ಆಗಮನದೊಂದಿಗೆ 19ನೇ ಶತಮಾನದಲ್ಲಿ ಗೋಚರಿಸಿತು ಎಂಬುದು ನಿಜ. ಈ ಮೀಮಾಂಸೆ ಮತ್ತು ವಿಮರ್ಶೆಯನ್ನು ತೌಲನಿಕವಾಗಿ ನೋಡಿದಾಗ ಮೀಮಾಂಸೆ ಸಾರ್ವತ್ರಿಕವಾಗಿ ಇಡೀ ಸಾಹಿತ್ಯಕ್ಕೆ ಅನ್ವಯವಾಗುವ ಸಿದ್ಧಾಂತವಾದರೆ, ವಿಮರ್ಶೆಯು ಅವುಗಳನ್ನು ನಿರ್ದಿಷ್ಟವಾಗಿ ಒಂದು ಕೃತಿಗೆ ಅನ್ವಯಿಸಿ ಅದರ ಬೆಲೆ ಕಟ್ಟುವುದೇ ಆಗಿದೆ. ಮೀಮಾಂಸೆ ಎಂದರೆ ಚರ್ಚೆ, ವಿಮರ್ಶೆ ಎಂದರೆ ಮೌಲ್ಯನಿರ್ಣಯ.

ವಿಮರ್ಶೆ ಒಂದು ಕೃತಿಯನ್ನು ಓದುಗನ ಅಂತರಾಳಕ್ಕೆ ಕೊಂಡೊಯ್ಯಬಲ್ಲದು ಎಂಬುದು ಸಾಹಿತ್ಯ ವಲಯದಲ್ಲಿ ಕೇಳಿ ಬರುತ್ತಿದೆ. ಭಾರತೀಯ ಸಾಹಿತ್ಯದಲ್ಲಿ ಕಾವ್ಯಮೀಮಾಂಸೆ ಬೆಳೆದು ಬಂದಂತೆ ವಿಮರ್ಶೆ ಬೆಳೆದು ಬಂದಿರಲಿಲ್ಲ. ಆಧುನಿಕ ಸಾಹಿತ್ಯದ ರಚನೆಯ ನಂತರವೇ ಕಾವ್ಯಮೀಮಾಂಸೆ ಹಿಂದೆ ಸರಿದು ವಿಮರ್ಶೆ ಪ್ರಮುಖ ಸ್ಥಾನವನ್ನು ಗಿಟ್ಟಿಸಿಕೊಂಡಿತು. ಭಾರತೀಯ ಸಾಹಿತ್ಯದಲ್ಲಿ ಭರತನಿಂದ ಹಿಡಿದು 15ನೇ ಶತಮಾನದವರೆಗೆ ಸಾಹಿತ್ಯ ಚಿಂತಕರು, ಲಾಕ್ಷಣಿಕರು ಕಾಣಿಸುತ್ತಾರೆಯೇ ಹೊರತು ವಿಮರ್ಶಕರು ಕಾಣಸಿಗುವುದಿಲ್ಲ. ಹೀಗಾಗಿ ಕನ್ನಡ ಸಾಹಿತ್ಯದಲ್ಲಿ ಅನೇಕ ವಿಮರ್ಶಕರು ಹುಟ್ಟಿ ಬಂದಿದ್ದಾರೆ. ವಿಮರ್ಶಾ ಸಿದ್ಧಾಂತಗಳನ್ನು ಅಳವಡಿಸಿಕೊಂಡು ಕೃತಿಗಳಿಗೆ ಮೌಲ್ಯವನ್ನು ಕಟ್ಟಿ ಓದುಗರ ಸಂಖ್ಯೆಯನ್ನು ಹೆಚ್ಚಿಸುತ್ತಿದ್ದಾರೆ. ಹೀಗೆ ಯೋಗ್ಯ ಕೃತಿಯನ್ನು ಸರ್ವಕಾಲಕ್ಕೂ ಉಳಿಯುವಂತೆ ಮಾಡುವ ಕೀರ್ತಿ ವಿಮರ್ಶಕರದ್ದಾಗಿದೆ. ಇಂತಹ ವಿಮರ್ಶಕರ ಸಾಲಿನಲ್ಲಿ ಡಾ.ಜಿ.ಎಸ್.ಶಿವರುದ್ರಪ್ಪನವರೂ ಕಂಡು ಬರುತ್ತಾರೆ. ಇವರು ಮೀಮಾಂಸೆಯನ್ನು ವಿಮರ್ಶಿಸಿ ನೋಡುವ ದೃಷ್ಟಿಕೋನ ವಿಶೇಷವಾದದ್ದು. ಹಾಗಾಗಿ ಅವರ ಮೀಮಾಂಸೆಯ ವಿಚಾರಗಳನ್ನು ತಿಳಿದುಕೊಳ್ಳುವ ಸಣ್ಣ ಪ್ರಯತ್ನ ಈ ಲೇಖನದ್ದು.

**KEYWORDS:**

ಜಿ.ಎಸ್. ಶಿವರುದ್ರಪ್ಪ, ಮೀಮಾಂಸೆ, ಅಲಂಕಾರ, ಸೌಂದರ್ಯ, ತೌಲನಿಕ.

ಸೌಂದರ್ಯಾನುಭವ ಎನ್ನುವುದು ತುಂಬ ಅಮೂರ್ತವಾದ ಸಂಗತಿ. ಇದನ್ನು ಮೂಲಮಾನವನ್ನಾಗಿ ಮಾಡಿಕೊಂಡು ವಿಮರ್ಶಕರು ಕಾವ್ಯಗಳನ್ನು ಪರಿಶೀಲಿಸಲು ಹೊರಟಿರುವುದು ನಮಗೆ ತಿಳಿದ ವಿಷಯ. ವಿಮರ್ಶೆಗೆ ಮೂಲವಾದ ಕಾವ್ಯಸೌಂದರ್ಯದ ಅಥವಾ ಕಾವ್ಯಾನುಭವದ ವಿವಿಧ ಅಭಿವ್ಯಕ್ತಿಯ ಮುಖಗಳ ಕುರಿತು ಚರ್ಚಿಸಿದ್ದಾರೆ. ಕಾವ್ಯ ಮೂಲತಃ ಸೌಂದರ್ಯ ಅನುಭವದ ವಿವಿಧ ಅಭಿವ್ಯಕ್ತಿ. ಕಾವ್ಯ ಚರ್ಚೆಗೆ ಹೊರಡತಕ್ಕವರಿಗೆ ಮೊದಲು ಈ ಸೌಂದರ್ಯ ಅನುಭವದ ಅಭಿವ್ಯಕ್ತಿ ವೈಖರಿಯ ವೈವಿಧ್ಯತೆಗಳ ಪರಿಚಯ ಹಾಗೂ ಪ್ರಜ್ಞೆ ಅತ್ಯಂತ ಅಗತ್ಯ ಎಂಬುದನ್ನು 'ಸೌಂದರ್ಯ ಸಮೀಕ್ಷೆ'ಯಲ್ಲಿ ಅನುಭವ ಗಮ್ಯವಾಗಿ ಚರ್ಚಿಸಿರುವುದನ್ನು ಕಾಣುತ್ತೇವೆ.

ಭಾರತೀಯ ಕಾವ್ಯಮೀಮಾಂಸೆಯ ತಿಳಿವಿನ ಜೊತೆಗೆ ನಮ್ಮ ಇಂದಿನ ವಿಮರ್ಶೆಯ ನಿಲುವುಗಳನ್ನು ರೂಪಿಸಿರುವ ಪಾಶ್ಚಾತ್ಯ ಸಾಹಿತ್ಯ ವಿಮರ್ಶೆಯ ಒಂದು ಮುಖ್ಯ ಭಾಗವಾಗಿರುವ ಪಾಶ್ಚಾತ್ಯ ಕಾವ್ಯಮೀಮಾಂಸೆಯ ಪರಿಜ್ಞಾನವೂ ಅತ್ಯಂತ ಅಗತ್ಯವಾಗಿದೆ. ಮುಖ್ಯವಾಗಿ ಕೆಲವು ಕಾವ್ಯ ತತ್ವ ಹಾಗೂ ಪರಿಕಲ್ಪನೆ ಮತ್ತಿತರ ಸಂಗತಿಗಳನ್ನು ತೌಲನಿಕವಾಗಿ ವಿವೇಚಿಸುವ ಕಡೆಗೆ ಇದುವರೆಗೆ ಸುಸಮರ್ಥವಾಗಿ ನಿರೂಪಿತವಾಗಿರುವ ಸಂಗತಿಗಳನ್ನು ಸಾಧ್ಯವಾದ ಮಟ್ಟಿಗೆ ಪುನರಾವರ್ತಿಸದೆ, ಆದರೆ ಅವುಗಳನ್ನು ಇಲ್ಲಿನ ವಿಷಯ ಪ್ರತಿಪಾದನೆಗೆ ಅಗತ್ಯವಾದೆಡೆ ಬಳಸಿಕೊಳ್ಳುತ್ತ, ಪೂರ್ವ ಹಾಗೂ ಪಶ್ಚಿಮದ ಚಿಂತನೆಗಳಲ್ಲಿರುವ ಸಾಮ್ಯ ಹಾಗೂ ವೈಶಿಷ್ಟ್ಯಗಳನ್ನು ಗುರುತಿಸುತ್ತ. ಈ ತೌಲನಿಕ ವಿಧಾನದಿಂದ ಹೊರಡುವ ಕೆಲವು ಹೊಸ ಅಥವಾ ಬೇರೆಯೆ ಆದ ವಿಚಾರಗಳನ್ನು 'ಕಾವ್ಯಾರ್ಥ ಚಿಂತನ'ದಲ್ಲಿ ಗಮನಿಸಬಹುದು.

ವಚನಕಾರರು ತಾವು ಬರೆದದ್ದು ಸಾಹಿತ್ಯ ಹೌದೋ ಅಲ್ಲವೋ ಎಂಬುದರ ಬಗ್ಗೆ ತಟಸ್ಥರಾಗಿದ್ದರೂ. ಅವುಗಳನ್ನು ಇಂದು ನಾವು ಸಾಹಿತ್ಯವೆಂದೇ ಪರಿಗಣಿಸಿವುದರಿಂದ 'ಆನು ಒಲಿದಂತೆ ಹಾಡುವೆ' ಎಂದ ಬಸವಣ್ಣನವರ ಮಾತನ್ನು ನಾವು ವಚನಕಾರರ ಕಾವ್ಯತತ್ವ ಎಂದೇ ಭಾವಿಸುತ್ತೇವೆ. ಹೀಗೆ ವಚನಕಾರರ ಬರೆವಣಿಗೆಯ ಹಿನ್ನಲೆಗೆ ಇರಬಹುದಾದ ಸಾಹಿತ್ಯಿಕ ಧೋರಣೆಗಳನ್ನು ಅವರ 'ಕಾವ್ಯ ತತ್ವ' ಎಂದು ನೋಡುವುದು ತಪ್ಪೇನಲ್ಲ. ಬಸವಣ್ಣನವರು ಶಬ್ದದ ಅಥವಾ ಪದದ ಬದಲು ನುಡಿ ಎಂಬ ಮಾತನ್ನು ಬಳಸುತ್ತಾರೆ. ಅಭಿವ್ಯಕ್ತಿ ಎಂಬರ್ಥದಲ್ಲಿ 'ನುಡಿ' ಅಥವಾ ಅಭಿವ್ಯಕ್ತಿ ಹೇಗಿರಬೇಕೆಂಬುದನ್ನು ಕುರಿತು 'ನುಡಿದರೆ ಮುತ್ತಿನ ಹಾರದಂತಿರಬೇಕು' ಎನ್ನುತ್ತಾರೆ. ವಾಸ್ತವವಾಗಿ ಅತ್ಯುತ್ತಮ ನುಡಿಗಟ್ಟಿನ ಅಥವಾ ಶೈಲಿಯ ಲಕ್ಷಣ ಇದು. ಅಭಿವ್ಯಕ್ತಿ ಎಂದರೆ ಅನುಭವವು ನುಡಿಗಳಲ್ಲಿ ಶಬ್ಧರೂಪದ ಪದಗಳಲ್ಲಿ ವಿನ್ಯಾಸಗೊಳ್ಳುವ ಕ್ರಮ, ಈ ಶಬ್ದಗಳ ಜೋಡಣೆಗೆ ಬಸವಣ್ಣನವರು ಕೊಡುವ ಉಪಮೆ 'ಮುತ್ತಿನಹಾರದ್ದು'. ಕೊಲ್‌ರೀಜ್ ಹೇಳುವ 'ಅತ್ಯುತ್ತಮ ಪದಗಳು ಅತ್ಯುತ್ತಮ ರೀತಿಯಲ್ಲಿ' ಎಂಬ ಮಾತನ್ನು ಇಲ್ಲಿ ನೆನೆಯಬಹುದು. ಈ ವಚನದ

ಎರಡನೇ ಸಾಲು ಕೋಡುವ ಅರ್ಥವೇ ಬೇರೆ, ಅದೇ ಅಭಿಪ್ರಾಯದ ವ್ಯಾಖ್ಯಾನಕ್ಕೆ 'ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು'. ಮೊದಲ ಪಂಕ್ತಿ ಶಬ್ಧಗಳ ಜೋಡಣೆಯ ಸೊಗಸನ್ನು ಹೇಳಿದರೆ ಎರಡನೇ ಪಂಕ್ತಿ ಶಬ್ಧ ಸಂಘಟನೆಯ ಮೂಲಕ ಅಭಿವ್ಯಕ್ತಿಯಾಗುವ ಅರ್ಥವಂತಿಕೆಯನ್ನು ಹೇಳುತ್ತದೆ. ಹಾಗೆಯೇ ಮೂರನೇ ಪಂಕ್ತಿಯ 'ಸ್ಫಟಿಕದ ಸಲಾಕೆ' ಎಂಬುದು ಅರ್ಥಸ್ಪಷ್ಟತೆಯನ್ನು, ಕೊನೆಯ ನಾಲ್ಕು ಮತ್ತು ಐದನೇ ಪಂಕ್ತಿಯ 'ಲಿಂಗ ಮೆಚ್ಚಿ' ಎನ್ನುವುದು ಮಾತಿನ ಪರಮೋದ್ದೇಶವನ್ನು ಒತ್ತಿ ಹೇಳುತ್ತದೆ. ಹೀಗೆ ಜಿ.ಎಸ್.ಶಿವರುದ್ರಪ್ಪನವರು ಪ್ರಾಚೀನ ಆಲಂಕಾರಿಕರ ವ್ಯಾಖ್ಯಾನಗಳನ್ನು ಕಾಲಘಟ್ಟಕ್ಕೆ ಸಮೀಕರಿಸಿ ಆಧುನಿಕ ಪರಿಭಾಷೆಯಲ್ಲಿ ನೋಡುವ ಪರಿ ಮತ್ತು ಸಾಹಿತ್ಯವನ್ನು ಕುರಿತು ಚರ್ಚೆ ಮಾಡುವ ವಿಧಾನ ವಿಭಿನ್ನವಾದದ್ದು.

ಕನ್ನಡ ಕಾವ್ಯ ಪರಂಪರೆಯಲ್ಲಿ ಕಂಡು ಬರುವ ವಿಶೇಷತೆ ಎಂದರೆ ಕನ್ನಡದಲ್ಲಿ ಕಾವ್ಯ ಲಕ್ಷಣವನ್ನು ಕುರಿತ ಕೃತಿಗಳ ಜೊತೆಜೊತೆಗೆ ಕನ್ನಡ ಕವಿಗಳು ತಮ್ಮ ಕಾವ್ಯದ ಒಂದು ಅಂಗವಾಗಿ ಕಾವ್ಯ ಚರ್ಚೆಯನ್ನು ನಡೆಸಿಕೊಂಡು ಬಂದಿದ್ದಾರೆ. ಸಂಸ್ಕೃತದಲ್ಲಾದರೆ ಕಾವ್ಯವೇ ಬೇರೆ, ಕಾವ್ಯ ಮೀಮಾಂಸೆಯೇ ಬೇರೆ ಎಂಬಂತೆ ಕಾಣುತ್ತದೆ. ಕಾವ್ಯ ನಿರ್ಮಿತಿ ಮತ್ತು ಕಾವ್ಯವನ್ನು ಕುರಿತ ಚಿಂತನೆ ಅಥವಾ ಚರ್ಚೆ ಈ ಎರಡೂ ತಮಗೆ ತಾವೇ ಪ್ರತ್ಯೇಕವಾದ ಚಟುವಟಿಕೆಗಳಾದರೂ, ಇವು ಒಂದಕ್ಕೊಂದು ಪೂರಕವಾದ ವಿಷಯಗಳಾಗಿವೆ. ಕಾವ್ಯ ನಿರ್ಮಿತಿಯಲ್ಲಿ ತೊಡಗುವವನು ಕವಿ; ಕಾವ್ಯವನ್ನು ಕುರಿತ ಚಿಂತನೆಯಲ್ಲಿ ಅಥವಾ ಚರ್ಚೆಯಲ್ಲಿ ತೊಡಗುವವನು ಅಲಂಕಾರಿಕ ಅಥವಾ ಲಾಕ್ಷಣಿಕ, ಇವತ್ತಿನ ಪರಿಭಾಷೆಯಲ್ಲಿ ಹೇಳುವುದಾದರೆ ವಿಮರ್ಶಕ ಎಂದು ಹೇಳಿ ಮೀಮಾಂಸಕ ಮತ್ತು ವಿಮರ್ಶಕನ ಅಂತರ್ಸಂಬಂಧವನ್ನು ಸರಳವಾಗಿ ವ್ಯಾಖ್ಯಾನಿಸಿದ್ದಾರೆ.

ಕಾವ್ಯ ಹಾಗೂ ಕಾವ್ಯ ಚರ್ಚೆಯ ಹಿನ್ನೆಲೆಯಲ್ಲಿ ನಮ್ಮ ಪ್ರಾಚೀನ ಕವಿಗಳು ಉದ್ದಕ್ಕೂ ತಮ್ಮ ಕಾವ್ಯ ನಿರ್ಮಿತಿಯ ಸಂದರ್ಭದಲ್ಲಿ ಕಾವ್ಯ ಸ್ವರೂಪವನ್ನು ಕುರಿತು ತಮ್ಮ ಗ್ರಹಿಕೆಗಳನ್ನು, ಕಲ್ಪನೆಗಳನ್ನು, ಪ್ರತಿಕ್ರಿಯೆಗಳನ್ನು, ತಮ್ಮ ಕೃತಿ ರಚನೆಯ ಪ್ರಾಸ್ತಾವಿಕ ಹಂತಗಳಲ್ಲಿ ಅಭಿವ್ಯಕ್ತಿ ಪಡಿಸುವುದರ ಮೂಲಕ ಕಾವ್ಯಾಂತರರ್ಗತ ಕಾವ್ಯ ಚರ್ಚೆವೊಂದನ್ನು ಬೆಳೆಸಿದ್ದಾರೆ ಎಂಬುದು ಜಿ.ಎಸ್.ಎಸ್. ಅವರ ಚಿಂತನೆ. ಈ ಬಗೆಯ ಕಾವ್ಯ ಚರ್ಚೆಯ ಪ್ರಸ್ತಾವನೆಗಳಲ್ಲಿ ನಮ್ಮ ಕನ್ನಡ ಕವಿಗಳು ಬಹುಮಟ್ಟಿಗೆ ಭಾರತೀಯ ಕಾವ್ಯಮೀಮಾಂಸೆಯ ಪರಿಕಲ್ಪನೆ ಹಾಗೂ ಪರಿಭಾಷೆಗಳನ್ನೇ ಧಾರಾಳವಾಗಿ ಬಳಸಿಕೊಂಡರೂ, ಕಾವ್ಯ ನಿರ್ಮಿತಿಯ ಬಗ್ಗೆ ತಮ್ಮದೇ ಆದ ಹೊಳಹುಗಳನ್ನು ಪ್ರಕಟಿಸಿದ್ದಾರೆ. ಜೊತೆಗೆ ಅವರು ತಮ್ಮ ಹಿಂದಿರುವ ಕಾವ್ಯ ಪರಂಪರೆಯನ್ನು ಅದರ ನಿಯಂತ್ರಕ ಶಕ್ತಿಗಳನ್ನು ಕುರಿತು ತೋರುವ ಪ್ರತಿಕ್ರಿಯೆಗಳು ಮತ್ತು ದಾಖಲಿಸುವ ಸಾಹಿತ್ಯಕ ಚರ್ಚೆಗಳು ತುಂಬಾ ಸ್ವಾರಸ್ಯಕರವೂ, ಗಣನೀಯವೂ

ಆಗಿವೆ. ಅದರಲ್ಲಿಯೂ ಕನ್ನಡ ಕಾವ್ಯದ ಮೇಲೆ ಆಕರ್ಷಕವೂ ದಟ್ಟವೂ ಆದ ಪ್ರಭಾವ ಮತ್ತು ಸವಾಲುಗಳನ್ನು ಒಡ್ಡಿದ ಸಂಸ್ಕೃತ ಕಾವ್ಯ ಪರಂಪರೆಯ ಹಿನ್ನೆಲೆಯಲ್ಲಿ, ಉದ್ದಕ್ಕೂ ಪ್ರಾಚೀನ ಕನ್ನಡ ಕವಿಗಳು ತಮ್ಮ ಕಾವ್ಯ ಭಾಷೆಯನ್ನು ಕುರಿತು ನಡೆಸಿದ ಚರ್ಚೆಯ ಸಂದರ್ಭದಲ್ಲಿ ನಿಷ್ಪನ್ನಗೊಂಡ 'ಮಾರ್ಗ' ಮತ್ತು 'ದೇಸಿ' ಗಳನ್ನು ಕುರಿತ ಚಿಂತನೆಗಳು ಭಾರತೀಯ ಕಾವ್ಯಮೀಮಾಂಸೆಯ 'ರೀತಿ' ಸಿದ್ಧಾಂತಕ್ಕೆ ಕನ್ನಡವು ನೀಡಿದ ಕೊಡುಗೆಗಳಾಗಿವೆ. ಕನ್ನಡದಲ್ಲಿ ಕಾವ್ಯಮೀಮಾಂಸೆಯ ವಿಚಾರವನ್ನು ಕುರಿತು ಹೇಳುವಲ್ಲಿ ಮೊಟ್ಟಮೊದಲು ಗಮನಿಸಬೇಕಾದದ್ದು ತಿ.ನಂ.ಶ್ರೀಕಂಠಯ್ಯನವರ 'ಭಾರತೀಯ ಕಾವ್ಯಮೀಮಾಂಸೆ'ಯನ್ನು ಸಂಸ್ಕೃತ ಭಾಷೆಯಲ್ಲಿರುವ ಕಾವ್ಯ ಲಕ್ಷಣ ಗ್ರಂಥಗಳಿಗೆ ಪ್ರಧಾನವಾಗಿ ಅವಲಂಬಿಸಿ ಇದು ರಚಿತವಾಗಿದೆ. ಕನ್ನಡದಲ್ಲಿ ದೊರೆಯುವ ಲಕ್ಷಣ ಗ್ರಂಥಗಳನ್ನು ಕುರಿತು ಪರಿಶಿಷ್ಟದಲ್ಲಿ ಒಂದು ಅಧ್ಯಾಯವನ್ನು ಕೊಡಲಾಗಿದೆ. ಈ ಗ್ರಂಥ ಮೂರು ಭಾಗಗಳಲ್ಲಿ ವಿಸ್ತೃತವಾಗಿದೆ. ಮೊದಲ ಭಾಗದಲ್ಲಿ ಅಲಂಕಾರ ಶಾಸ್ತ್ರದ ಬೆಳವಣಿಗೆ, ಎರಡನೆಯ ಭಾಗದಲ್ಲಿ ಕವಿ–ಕಾವ್ಯ–ಸಹೃದಯ ವಿಚಾರ, ಮೂರನೆಯದರಲ್ಲಿ ರಸ–ಧ್ವನಿ ವಿಚಾರ ನಿರೂಪಿತವಾಗಿದೆ. ಐನೂರಕ್ಕೂ ಮೀರಿರುವ ಪುಟಗಳಲ್ಲಿ ಆಗಲೇ ಸಾಕಷ್ಟು ಜನಪ್ರಿಯವಾಗಿರುವ ಈ ಗ್ರಂಥ ಭಾರತೀಯ ಕಾವ್ಯಮೀಮಾಂಸೆಯ ಎಲ್ಲ ಮುಖ್ಯ ವಿಚಾರಗಳನ್ನೂ ಮೂಲ ಲಾಕ್ಷಣಿಕರ ಹೇಳಿಕೆಗಳಿಗೆ ವಿರೋಧವಾಗದ ರೀತಿಯಲ್ಲಿ ಅತ್ಯಂತ ಪ್ರಾಮಾಣಿಕವಾಗಿ, ಸರಳವಾಗಿ ನಿರೂಪಿಸುತ್ತದೆ. ಭಾರತೀಯ ಲಾಕ್ಷಣಿಕರ ಅಭಿಪ್ರಾಯಗಳನ್ನು ಪುನರನುಭವಿಸಿ ತಿಳಿಯಪಡಿಸುವ ಇಂಥ ಪ್ರಮಾಣ ಗ್ರಂಥ ಬಹುಶಃ ಇತರ ಭಾರತೀಯ ಭಾಷೆಗಳಲ್ಲಿ ಬಂದಿರಲಾರದು. ಇಂಗ್ಲಿಷಿನಲ್ಲಂತೂ ಈ ವಿಷಯವನ್ನು ಕುರಿತು ಇಂಥ ಕೃತಿ ಬಂದಿಲ್ಲವೆಂದರೆ ತಪ್ಪಾಗಲಾರದು. ಕನ್ನಡದಲ್ಲಿ ಕಾವ್ಯ ಲಕ್ಷಣ ಗ್ರಂಥಗಳು ಎಂಬ ವಿಷಯದಿಂದ ಪ್ರಚೋದಿತವಾದ ವಿಮರ್ಶಾತ್ಮಕ ಹಾಗೂ ಸಂಶೋಧನಾತ್ಮಕ ಬರವಣಿಗೆಯಾಗಿದೆ. ಕನ್ನಡದಲ್ಲಿ ಕಾವ್ಯ ತತ್ವದ ಬೆಳವಣಿಗೆಯನ್ನು ಐತಿಹಾಸಿಕವಾಗಿ ಅವಲೋಕಿಸುವ ಪುಸ್ತಕ ಎಂದು 'ಕನ್ನಡ ಕಾವ್ಯತತ್ತ್ವ ಚಿಂತನೆ' ಎಂಬ ಸೂತ್ರ ರೂಪದ ಬರೆವಣಿಗೆಯಲ್ಲಿ ಹೇಳಿಕೊಂಡಿದ್ದಾರೆ.

ಜಿ.ಎಸ್.ಶಿವರುದ್ರಪ್ಪ ಅವರ ಚಿಂತನ ಕ್ರಮದಲ್ಲಿ ಸೃಜನ ಸಾಹಿತ್ಯವನ್ನು ಹಿನ್ನೆಲೆಗೆ ಇರಿಸಿಕೊಂಡು ಮೀಮಾಂಸೆಯ ವಿಚಾರಗಳನ್ನು ಚರ್ಚಿಸಲಾಗಿದೆ. ಕಾವ್ಯಮೀಮಾಂಸೆ ನಡೆಯುವುದು, ನಡೆಯಬೇಕಾದದ್ದು, ಕಾವ್ಯ ಅಥವಾ ಸಾಹಿತ್ಯ ಪರಂಪರೆಯ ಹಿನ್ನೆಲೆಯಲ್ಲಿ ಎಂಬುದು ಈ ಲೇಖನದಿಂದ ತಿಳಿಯುತ್ತದೆ. ಇಲ್ಲದಿದ್ದರೆ ಸಿದ್ಧಾಂತಗಳು ಕೇವಲ ಸಿದ್ಧಾಂತಗಳಾಗಿ ನಿಲ್ಲುವ ಸಾಧ್ಯತೆ ಇದೆ ಎಂದು ಹೇಳಬಹುದು

## ಪರಾಮರ್ಶನ ಗ್ರಂಥಗಳು:


1. ಶಿವರುದ್ರಪ್ಪ ಜಿ.ಎಸ್., (1965), ಸೌಂದರ್ಯ ಸಮೀಕ್ಷೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.
2. ಕೃಷ್ಣಮೂರ್ತಿ ಕೆ., (1971), ಭಾರತೀಯ ಕಾವ್ಯಮೀಮಾಂಸೆ: ತತ್ವ ಮತ್ತು ಪ್ರಯೋಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
3. ಕೃಷ್ಣಮೂರ್ತಿ ಕೆ., (1985), ಕನ್ನಡದಲ್ಲಿ ಕಾವ್ಯ ತತ್ತ್ವ, ಡಾ.ಕೆ.ಕೃಷ್ಣಮೂರ್ತಿ ಸಂಸ್ಕೃತ ಸಂಶೋಧನಾ ಪ್ರತಿಷ್ಠಾನ, ಬೆಂಗಳೂರು.
4. ಹೊನ್ನುಸಿದ್ದಾರ್ಥ ಸಿ.ಬಿ., (2013), ಜಿ.ಎಸ್.ಶಿವರುದ್ರಪ್ಪನವರ ಸಮಗ್ರ ಸಾಹಿತ್ಯ ಅವಲೋಕನ, ಕನ್ನಡ ಅಧ್ಯಯನ ಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
5. ಶಿವರುದ್ರಪ್ಪ ಜಿ.ಎಸ್., (2007), ಕಾವ್ಯತತ್ತ್ವ ಚಿಂತನೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
6. ಶ್ರೀಕಂಠಯ್ಯ ತಿ.ನಂ., (1994), ಭಾರತೀಯ ಕಾವ್ಯಮೀಮಾಂಸೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.
7. ಬಾಲಸುಬ್ರಹ್ಮಣ್ಯ ಎನ್., (1992), ಲಾಂಜೈನಸ್‌ನ 'ಔನ್ನತ್ಯ ವಿಚಾರ ಚರ್ಚೆ' ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು.
8. ಶ್ರೀನಿವಾಸ ಅಯ್ಯಂಗಾರ್ ಎಂ.ಎ., (1960), ಗ್ರೀಕರ ತತ್ವಶಾಸ್ತ್ರಸಾರ ಸಂಗ್ರಹ, ಕನ್ನಡ ಗ್ರಂಥ ಮಾಲೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.
9. ತಿಪ್ಪೇರುದ್ರಸ್ವಾಮಿ ಹೆಚ್., (2010), ತೌಲನಿಕ ಕಾವ್ಯಮೀಮಾಂಸೆ, ಡಿ.ವಿ.ಕೆ ಮೂರ್ತಿ ಪ್ರಕಾಶನ, ಮೈಸೂರು.
10. ಶಿವರುದ್ರಪ್ಪ ಜಿ.ಎಸ್., (1998), ಕಾವ್ಯಾರ್ಥ ಚಿಂತನ, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು.



**Funding:**
This study was not funded by any grant.

**Conflict of interest:**
The Authors have no conflict of interest to declare that they are relevant to the content of this article.



**About the License:**
© The Authors 2024. The text of this article is open access and licensed under a Creative Commons Attribution 4.0 International License.